ನಿಗದಿಪಡಿಸತಕ್ಕ ಪರಿಪಾಠ ಇಲ್ಲ. ಹರಾಜಿನಲ್ಲಿ ಭಾಗವಹಿಸಿ ರೀಲರ್‌ಗಳು ರೇಷ್ಮೆ ಗೂಡುಗಳನ್ನು ಕೊಂಡುಕೊಳ್ಳುತ್ತಾರೆ. ಮಾರುಕಟ್ಟೆಯಲ್ಲಿ ಆವತ್ತು ಏನು ಬೆಲೆ ಇರುತ್ತದೆ ಆ ಬೆಲೆಗೆ ರೇಷ್ಮೆ ಗೂಡನ್ನು ಮಾರಿ ಬಂದ ಹಣವನ್ನು ರೈತರು ಪಡೆದುಕೊಳ್ಳುತ್ತಾರೆ. ಎರಡನೇ ಪ್ರಶ್ನೆಗೆ ವಿಶೇಷ ಘಟಕ ಯೋಜನೆಯಲ್ಲಿ ಎಷ್ಟೆಷ್ಟು ಹಣ ಖರ್ಚಾಗಿದೆ ಅದಕ್ಕೆ ತಕ್ಕಂತೆ ಉತ್ಪಾದನೆಯಾಗಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದು ಜಿಲ್ಲಾ ಪರಿಷತ್ತಿನ ಜವಾಬ್ದಾರಿ. ಜಿಲ್ಲಾ ಪರಿಷತ್ತಿನಲ್ಲಿ ನಮ್ಮ ಇಲಾಖೆ ಅಧಿಕಾರಿಗಳು ಸಹ ಇರುತ್ತಾರೆ. ಪ್ರಾರಂಭದಲ್ಲಿ ರೇಷ್ಮೆಯನ್ನು ಉತ್ಪಾದನೆ ಮಾಡಬೇಕಾದರೆ ಹೆಚ್ಚು ಹಣವನ್ನು ಅಲ್ಲಿ ತೊಡಗಿಸಬೇಕಾಗುತ್ತದೆ. ಈ ಯೋಜನೆ ಸಮರ್ಥವಾಗಿ ಅನುಷ್ಠಾನವಾಗಬೇಕು, ಹೆಚ್ಚು ಹೆಚ್ಚು ಫಲಾನುಭವಿಗಳು ರೇಷ್ಮೆ ವ್ಯವಸಾಯದಲ್ಲಿ ತೊಡಗಬೇಕೆಂಬ ಭಾವನೆಯನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ಆ ಬಗ್ಗೆ ಇಲಾಖಾವತಿಯಿಂದ ಮತ್ತು ಜಿಲ್ಲಾ ಪರಿಷತ್ತಿನ ಸಹಯೋಗದೊಡನೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಗ್ರಾಮೀಣ ವಿದ್ಯುದ್ದೀಕರಣ

೧೩೫೪. ಶ್ರೀ ಕೆ.ವಿ. ರವೀಂದ್ರನಾಥ್‌ಬಾಬು (ಕೊಟ್ಟೂರು).— ಮಾನ್ಯ ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಗ್ರಾಮಾಂತರ ಪ್ರದೇಶಗಳಲ್ಲಿನ ವಿದ್ಯುದ್ದೀಕರಣಕ್ಕಾಗಿ ಸಾಮಗ್ರಿಗಳನ್ನು ಮಂಜೂರು ಮಾಡಿರುವುದು ನಿಜವಲ್ಲವೇ;

ಆ) ಗ್ರಾಮಾಂತರ ಪ್ರದೇಶಗಳಲ್ಲಿನ ವಿದ್ಯುದ್ದೀಕರಣಕ್ಕಾಗಿ ಸಾಮಗ್ರಿಗಳನ್ನು ಸರಬರಾಜು ಮಾಡದೇ ಇರುವುದು ಸಹ ನಿಜವಲ್ಲದೇ;

ಇ) ಕೂಡಲೇ ಸಾಮಗ್ರಿಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ಸರಬರಾಜು ಮಾಡಲು ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು).—

ಅ) ಹೌದು, ಗ್ರಾಮೀಣ ವಿದ್ಯುದ್ದೀಕರಣ ಮತ್ತು ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣಕ್ಕೆ ಸಾಮಗ್ರಿಗಳನ್ನು ಮಂಜೂರು ಮಾಡಿದೆ.

ಆ) ಇಲ್ಲ, ಉಪ್ಪ ಗ್ರಾಮಗಳು ಹರಿಜನ ಬಸ್ತಿಗಳು ಮತ್ತು ಗಿರಿಜನ ಕಾಲೋನಿಗಳ ವಿದ್ಯುದ್ದೀಕರಣ ಮತ್ತು ನೀರಾವರಿ ಪಂಪು ಸೆಟ್ಟುಗಳ ವಿದ್ಯುದ್ದೀಕರಣಕ್ಕೆ ನಿಗದಿಪಡಿಸಲಾಗಿರುವ ಗುರಿಗಳನ್ನು ಸಾಧಿಸಲು ಸಾಮಗ್ರಿಗಳನ್ನು ಸರಬರಾಜು ಮಾಡಲಾಗಿದೆ ಮತ್ತು ನಿಗಧಿತ ಗುರಿಗಳನ್ನು ಸಾಧಿಸಲಾಗಿದೆ.

ಇ) 'ಅ' ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ. ವಿ. ರವೀಂದ್ರನಾಥ ಬಾಬು.—ಮಾನ್ಯ ಮಂತ್ರಿಗಳು ಉತ್ತರ ನೀಡಿ ಆದರಲ್ಲಿ ರೂರಲ್ ಎಲೆಕ್ಟ್ರಿಫಿಕೇಷನ್‌ಗೆ ಮತ್ತು ಇರಿಗೇಷನ್ ಪಂಪ್‌ಸೆಟ್‌ಗಳ ಎನರ್ಜೈಸೇಷನ್‌ಗೆ ಏನು ಸ್ಯಾಂಕ್ಷನ್ ಮಾಡಿದ್ದಾರೂ ಅಷ್ಟು ಮೆಟೀರಿಯಲ್ಸ್ ಕಳಂಹಿಸಿಕೊಟ್ಟಿದೆ, ಟಾರ್ಗೆಟ್ ರೀಚ್ ಆಗಿದೆ ಎಂದು ಹೇಳಿದ್ದಾರೆ ಆದರೆ ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಏನಿದೆ ಇದು ಸ್ವಾತಂತ್ರ್ಯ ಬಂದಾಗಿನಿಂದ ಬ್ಯಾಕ್‌ವರ್ಡ್ ತಾಲ್ಲೂಕು. ಸಾಮಾನ್ಯವಾಗಿ ಪ್ರತಿಯೊಂದು ಜಿಲ್ಲೆಯಲ್ಲೂ ಈ ರೀತಿ ಬ್ಯಾಕ್‌ವರ್ಡ್ ತಾಲ್ಲೂಕುಗಳಿವೆ.

೧೦-೨೦ ಎ. ಎಂ.

ನಮ್ಮ ತಾಲ್ಲೂಕು ಏನಿದೆ it has been included in Rural Electrification Scheme. ಅದಕ್ಕೆ ಕೆಲವು ರೂಲ್ಸ್‌ಗಳಿವೆ. ೫ ವರ್ಷಗಳಿಗೆ ಡಿವೈಡ್ ಮಾಡಿ ಈ ಕಾಮಗಾರಿಯನ್ನು ತೆಗೆದುಕೊಂಡು ಪೂರ್ಣ ಮಾಡಬೇಕೆಂದು ಇದೆ. ನಮ್ಮ ತಾಲ್ಲೂಕನ್ನು ಹಿಂದುಳಿದ ತಾಲ್ಲೂಕೆಂದು ಗುರುತು ಮಾಡಿರುವಾಗ ಇರತಕ್ಕ ರೂಲ್ಸ್‌ನ್ನು ರಿಲ್ಯಾಕ್ಸ್ ಮಾಡಿ ೫ ವರ್ಷಗಳಲ್ಲಿ ಆಗುವ ಕೆಲಸವನ್ನು ಎರಡೂವರೆ ವರ್ಷಗಳಲ್ಲೇ ಮಾಡಿ ಮುಗಿಸುವುದಕ್ಕೆ ಅವಕಾಶ ಮಾಡಿ ಕೊಡಿ ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ನಾನು ಕೇಳಿಕೊಳ್ಳುತ್ತೇನೆ. ನಮ್ಮ ಹಳ್ಳಿ ಜನ

ಹೇಳುತ್ತಿದ್ದಾರೆ. ಅದೇನೆಂದರೆ, ನಾವು ಸಾಯುವವರೆಗೂ ಸಾಮ್ ಮಾಡುವುದೇ ಆಯಿತು, ಇನ್ನು ಕುಸ್ತಿ ಮಾಡುವುದು ಯಾವಾಗ ಅಂತ ಕೇಳುತ್ತಾರೆ. ಆದ್ದರಿಂದ ಇದು ಸ್ವಲ್ಪ ವಯಂದುವರಿಯುವುದಕ್ಕೆ ಅವಕಾಶ ಮಾಡಿ ಕೊಡಿ ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಎಸ್. ಎಂ. ಯಾಹ್ಯಾ.—ಮಾನ್ಯ ಸದಸ್ಯರು ಕೂಡ್ಲಿಗಿ ತಾಲ್ಲೂಕು ಹಿಂದುಳಿದ ತಾಲ್ಲೂಕು ಆಗಿದ್ದು, ಅಲ್ಲಿ ರೂರಲ್ ಎಲೆಕ್ಟ್ರಿಫಿಕೇಷನ್ ಸ್ಕೀಮು ಜಾರಿಯಲ್ಲಿದೆ ಎಂದು ಅವರೇ ಹೇಳಿದ್ದಾರೆ. ಆ ಸ್ಕೀಮಿನ ಪ್ರಕಾರ ೫ ವರ್ಷಗಳಲ್ಲಿ ಆ ಕೆಲಸ ಮಾಡಬೇಕು. ಆ ೫ ವರ್ಷಗಳಲ್ಲಿ ಆ ಕೆಲಸ ಆಗಿಯೇ ಆಗುತ್ತದೆ. ಅದಕ್ಕಿಂತ ಬೇಗ ಮಾಡುವಂತೆ ಮಾನ್ಯ ಸದಸ್ಯರು ಹೇಳಿದ್ದಾರೆ. ೫ ವರ್ಷಗಳಲ್ಲಿ ಆ ಕೆಲಸ ಮುಗಿದರೆ ದೊಡ್ಡದು. ಆದರೂ ಮಾನ್ಯ ಸದಸ್ಯರ ಇಚ್ಛೆಯಂತೆ ಅದಕ್ಕಿಂತ ಬೇಗನೆ ಮುಗಿಸ ಬೇಕೆಂದು ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ.

ಅಧ್ಯಕ್ಷರು.—ತಡೆಹಿಡಿಯಲಾದ ಪ್ರಶ್ನೆಗಳು.

ಪ್ರಶ್ನೆ ನಂ. ೭೭ (೨೭೦)
ಪ್ರಶ್ನೆ ನಂ. ೭೦ (೨೨೧)
ಪ್ರಶ್ನೆ ನಂ. ೧೯೫ (೧೮೮)
ಪ್ರಶ್ನೆ ನಂ. ೪೩೫ (೧೩೯೫)
} ಸಂಬಂಧಿಸಿದ ಮಾನ್ಯ ಸದಸ್ಯರುಗಳು ಗೈರುಹಾಜರಾಗಿದ್ದರು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕಾಳಿ ಜಲವಿದ್ಯುತ್ ಯೋಜನೆ ಬಗ್ಗೆ

೧೪೯೨. ಶ್ರೀ ಪ್ರಭಾಕರ್ ಎಸ್. ರಾಣೆ (ಕಾರವಾರ),—ಮಾನ್ಯ ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಕಾಳಿ ವಿದ್ಯುತ್‌ಯೋಜನೆಯ ಕದ್ರಾ ಡ್ಯಾಮ್‌ನಡಿಯಲ್ಲಿ ಜಮೀನು ಮುಳುಗಡೆಯಾಗುವ ಕುಟುಂಬಗಳ ಸಂಖ್ಯೆ ಎಷ್ಟು?

ಆ) ಈ ಜನರಿಗೆ ಪುನರ್ವಸತಿ ವ್ಯವಸ್ಥೆ ಮಾಡಲಾಗಿದೆಯೇ, ಹಾಗಿದ್ದರೆ ಯಾವ ಪ್ರದೇಶದಲ್ಲಿ ಈ ವ್ಯವಸ್ಥೆಯನ್ನು ಮಾಡಲಾಗಿದೆ ಮತ್ತು ಅಲ್ಲಿ ಕಲ್ಪಿಸುವ ಸೌಕರ್ಯವೇನು?

ಇ) ಈ ಯೋಜನೆಯಿಂದ ನಿರಾಶ್ರಿತರಾಗಿರುವ ಕುಟುಂಬಗಳಲ್ಲಿಯ ನಿರುದ್ಯೋಗಿಗಳಿಗೆ ಕರ್ನಾಟಕ ವಿದ್ಯುತ್ ನಿಗಮದಲ್ಲಿ ಮತ್ತು ನಿರ್ಮಾಣ ಕಾರ್ಯ ಕೆ ಗೊಂಡಿರುವ ವಿವಿಧ ಗುತ್ತಿಗೆದಾರರಲ್ಲಿ ಎಷ್ಟು ಜನರಿಗೆ ಉದ್ಯೋಗ ಅವಕಾಶ ಕಲ್ಪಿಸಲಾಗಿದೆ.

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು).—

ಅ) ೩೨೫ ಕುಟುಂಬಗಳು ಕಾಳಿ ಯೋಜನೆಯ ಕದ್ರಾ ಅಣೆಕಟ್ಟನ್ನು ನಿರ್ಮಿಸುವುದರಿಂದ ಭೂಮಿಯನ್ನು ಕಳೆದುಕೊಳ್ಳುತ್ತಾರೆ.

ಆ) ಪುನರ್ವಸತಿ ಕೇಂದ್ರ ನಿರ್ಮಿಸುವ ಕಾರ್ಯವು ಪ್ರಗತಿಯಲ್ಲಿದೆ. ಕದ್ರಾ ಮತ್ತು ಕೊಡಸಳ್ಳಿ ಯೋಜನೆಯಲ್ಲಿ ತೊಂದರೆಯೊಳಗಾಗುವವರಿಗೆ ಮತ್ತು ಅದರಲ್ಲಿ ಯಾರು ವ್ಯವಸಾಯ ಭೂಮಿ ಬೇಕೆಂದು ಕೇಳಿರುವರೋ ಅವರಿಗೆ ಅಂಕೋಲ ತಾಲ್ಲೂಕಿನ ಹುಳವಳ್ಳಿ, ಕಲ್ಲೇಶ್ವರ, ಹೆಗ್ಗೇರಾ ಮತ್ತು ಡೊಂಗ್ರಿ ಹಳ್ಳಿಗಳಲ್ಲಿ ಪುನರ್ವಸತಿ ಕೇಂದ್ರವನ್ನು ನಿರ್ಮಿಸಲಾಗುವುದು. ಪುನರ್ವಸತಿ ಕೇಂದ್ರದಲ್ಲಿ ಈ ಕೆಳಗೆ ತಿಳಿಸಿರುವ ಸೌಲಭ್ಯವನ್ನು ಒದಗಿಸಲಾಗುವುದು (೧/ ವಸತಿ ನಿವೇಶನ (೨) ವ್ಯವಸಾಯ ಜಮೀನು (೩) ನೀರು ಸರಬರಾಜು ಮತ್ತು ವಿದ್ಯುಚ್ಛಕ್ತಿ (೪) ಕಾಲೋನಿ ರಸ್ತೆ (೫) ಸಾರ್ವಜನಿಕ ಉಪಯೋಗ ಕಟ್ಟಡಗಳು ಅಂದರೆ ಶಾಲೆ, ಆಸ್ಪತ್ರೆ, ಆಂಚೆ ಕಛೇರಿ ಮತ್ತು ಅಧಿಕಾರಿಗೆ ವಸತಿ, ಧಾರ್ಮಿಕ ಪೂಜಾ ಸ್ಥಳಗಳು ಪಂಚಾಯತಿ, ಕಟ್ಟಡ ಮುಂತಾದವು (೬) ಜನರನ್ನು ಸ್ಥಳಾಂತರಿಸುವಾಗ ತಾತ್ಕಾಲಿಕ ಕೆಡ್ಡಿನ ನಿರ್ಮಾಣ (೭) ತೊಂದರೆಗೊಳಗಾದವರ ಸಾಮಾನು ಸರಂಜಾಮುಗಳನ್ನು ಉಚಿತವಾಗಿ ಸಾಗಿಸಲು ಸೌಕರ್ಯ ಕೊಡಲಾಗುವುದು (೮) ವ್ಯವಸಾಯ ಭೂಮಿ ಯನ್ನು ತಲುಪಲು ದಾರಿಯನ್ನು ನಿರ್ಮಿಸಲಾಗುವುದು.

ಇ) ಸಧ್ಯಕ್ಕೆ ನಾಲ್ಕು ಜನರು ಮಾತ್ರ ಗುತ್ತಿಗೆದಾರರ ಹತ್ತಿರ ಕೆಲಸ ಮಾಡುತ್ತಿರುವುದು.